ಭಾನುವಾರ
20/07/2025

THE RURAL MIRROR.com Constructive Media

WWW.THERURALMIRROR.COM

# ದ ರೂರಲ್ ಮಿರರ್.ಕಾಂ

Constructive Media



ಬದುಕು ಪುರಾಣ

ನಾ ಕಾರಂತ ಪೆರಾಜೆ

# ರಾಮಬಾಣದ ಇರಿತ

ಬದುಕಿನ ವ್ಯವಹಾರದಲ್ಲಿ 'ರಾಮಬಾಣ' ಪದದ ಬಳಕೆ ಹೆಚ್ಚೆಗೊಂದರಂತೆ ಕಾಣಸಿಗುತ್ತದೆ! ಮುಖ್ಯವಾಗಿ ಔಷಧ ಸಂಬಂಧಿ ಪ್ರಚಾರದಲ್ಲಿ ಹಾಸುಹೊಕ್ಕಾಗಿದೆ. ಅದರಲ್ಲೂ ಮನೆಮದ್ದು ವಿಭಾಗದಲ್ಲಂತೂ ಯಥೇಷ್ಟವಾಗಿ 'ರಾಮ ಬಾಣ'ವನ್ನು ಹೊಸೆಯಲಾಗುತ್ತದೆ. ಅನುಭವಿಸಿದವರಿಗೆ ಫಲಾಫಲಗಳು ಗೊತ್ತಷ್ಟೇ! ತಂತಮ್ಮ ಔಷಧಿಗಳ ಫಲಿತಾಂಶಗಳು ರಾಮಬಾಣದಷ್ಟು ನಿಚ್ಚಳ. ಯಾವುದೇ ಸಂಶಯ ಪಡಬೇಕಾಗಿಲ್ಲ.

ಏನಿದು ರಾಮಬಾಣ? ಮರ್ಯಾದಾ ಪುರುಷೋತ್ತಮ ಶ್ರೀರಾಮನು ಮೂಡಿಗೆಯಿಂದ ಸಂಕಲ್ಪಿಸಿ ಶರ ತೆಗೆದು ಹೂಡಿದ ಎಂದಾದರೆ ಅದು ಸಂಕಲ್ಪವನ್ನು ಈಡೇರಿಸಿಯೇ ಪುನಃ ಮೂಡಿಗೆಯನ್ನು ಸೇರುತ್ತಿತ್ತು. ಅಂದರೆ 'ತಕ್ಷಣದ ಫಲಿತಾಂಶ, ಶೀಘ್ರ ಶಮನ' ಎಂದು ಅರ್ಥ ಮಾಡಿಕೊಳ್ಳೋಣ. ಯಾವ ವಿಷಯಕ್ಕೆ ನಾವು 'ರಾಮಬಾಣ'ವನ್ನು ಟಂಕಿಸುತ್ತೇವೆಯೋ ಆ ವಿಷಯದ ಆತ್ಯಂತಿಕವಾದ ಸ್ಥಿತಿ, ಫಲಿತಾಂಶವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವಂತೆ ಹೇಳಲು ಈ ಪದವನ್ನು ಬಳಸಲಾಗುತ್ತದೆ.

ಜಾಲತಾಣವನ್ನು ಜಾಲಾಡಿದಾಗ ಸಿಕ್ಕ ಕೆಲವು ಉದಾಹರಣೆಗಳು ಹೀಗಿವೆ. "ಸಕ್ಕರೆ ಕಾಯಿಲೆಗೆ ರಾಮಬಾಣ 'ಬೆಟ್ಟದ ನೆಲ್ಲಿಕಾಯಿ', ಹೊಟ್ಟೆ ಹುಳುವಿನ ಸಮಸ್ಯೆಗೆ ರಾಮಬಾಣ 'ಕರಡಿ ಸೊಪ್ಪು', ಹಲವು ಆರೋಗ್ಯ ಸಮಸ್ಯೆಗೆ ರಾಮಬಾಣ 'ಏಲಕ್ಕಿ', ಮೊಡವೆಗೆ ರಾಮಬಾಣ 'ಅಕ್ಕಿ ನೀರಿನ ಐಸ್‌ಕ್ಯೂಬ್', ಕಿವಿ ನೋವಿಗೆ ರಾಮಬಾಣ 'ಸಾಮ್ರಾಣಿ ಸೊಪ್ಪು', ರಕ್ತದೊತ್ತಡ, ರಕ್ತಹೀನತೆ ಹೃದಯ ಕಾಯಿಲೆಗೆ 'ಹಲಸಿನ ಹಣ್ಣು' ರಾಮಬಾಣ, ಅಸ್ತಮಾ ಕಾಯಿಲೆಗೆ 'ಆಡುಸೋಗೆ' ರಾಮಬಾಣ, ಬಾಣಂತಿಯರಿಗೆ ಹಾಗೂ ಚಿಕ್ಕ ಮಕ್ಕಳ ಶೀತ ಕೆಮ್ಮಿಗೆ ರಾಮ ಬಾಣ 'ಗಣಿಕೆ ಸೊಪ್ಪಿನ ಸಾರು', ಉರಿಮೂತ್ರ ತೊಂದರೆಗೆ 'ಕಲ್ಲಂಗಡಿ' ರಾಮಬಾಣ, ಕಫಕ್ಕೆ 'ಕಸ್ತೂರಿ ಮಾತ್ರೆ' ರಾಮಬಾಣ, ಕ್ಯಾನ್ಸರಿಗೆ 'ಲಕ್ಷ್ಮಣ ಫಲ ತಿನ್ನಿ', ಕಡೆ ಬೇರ್ (ಕಡೇರು) ಕಷಾಯವು ಬೆನ್ನು ನೋವಿನ ರಾಮಬಾಣ, ಮಲಬದ್ಧತೆಗೆ 'ವೀಳ್ಯದೆಲೆ' ರಾಮ ಬಾಣ.. ಹೀಗೆ.

ಹಿರಿಯ ವೈದ್ಯರು ಔಷಧೀಯ ಗುಣಗಳನ್ನು ತಮ್ಮ ಪಾರಂಪರಿಕ ಅನುಭವಗಳಿಂದ ದಾಖಲಿಸಿದರು. ಇಂತಿಂತಹ ರೋಗಕ್ಕೆ ಇಂತಿಂತಹ ಸೊಪ್ಪುಗಳು, ಚಿಗುರುಗಳು, ಗಡ್ಡೆಗಳು ಎಂದು ಗುರುತಿಸಿದರು. ಈ ಒಳಸುರಿಗಳನ್ನು ಬಳಸಿ ಮಾಡಿದ ಔಷಧವನ್ನು ರೋಗಿಗಳಿಗೆ ನೀಡಿದರು. ಸೇವಿಸಿದ ರೋಗಿಗಳು ಗುಣಮುಖರಾದರು. ಅವರು ನೀಡುವ ಔಷಧ ತಯಾರಿಯ 'ಫಾರ್ಮುಲಾ' ರೋಗಿಗೆ ಗೊತ್ತಿರುವುದಿಲ್ಲ.

ಉದಾ : 'ಅಮೃತಬಳ್ಳಿ ಎಲೆಯ ಕಷಾಯ ಮಾಡಿ. ಜ್ವರ, ಮೈಕೈನೋವಿಗೆ ರಾಮಬಾಣ' ಎಂಬ ಪ್ರಚಾರಕ್ಕೆ ಕಿವಿಯಾಗಿದ್ದೇವೆ. ಸತ್ಯ ಕೂಡ. ಪ್ರಚಾರ ಮಾಡುವವರು 'ರಾಮ ಬಾಣ'ದ ಗುಂಗಿನಲ್ಲಿ ಮುಖ್ಯ ವಿಷಯವನ್ನು



ಅರ್ಥೈಸಿಕೊಂಡಿರುವುದಿಲ್ಲ. 'ಎಷ್ಟು ಪ್ರಮಾಣದ ಎಲೆಯನ್ನು, ಎಷ್ಟು ಪ್ರಮಾಣದ ನೀರಿನಲ್ಲಿ, ಎಷ್ಟು ಹೊತ್ತು ಕುದಿಸಬೇಕು' ಇದು ಫಾರ್ಮುಲಾ. ಇದನ್ನು ಹೇಳುತ್ತಿದ್ದರೆ 'ರಾಮ ಬಾಣ' ಸಕ್ಸಸ್! ಆದರೆ ಮೇಲ್ನೋಟದ ಹೇಳಿಕೆಗಳಿಂದ 'ರಾಮ ಬಾಣ'ಕ್ಕೆ ಪ್ರಚಾರ ಸಿಕ್ಕರೂ, ಆ ಫಾರ್ಮುಲಾ ಗೊತ್ತಿಲ್ಲದೆ ಬಳಸಿದವರ ಸ್ಥಿತಿ ಅಯೋಮಯ

ಈ ಪದವು ಸದ್ಬಳಕೆಯಷ್ಟೇ ದುರ್ಬಳಕೆಯಾಗುತ್ತಿದೆ. ಬೀದಿ ಬದಿಯಲ್ಲಿ ಮಾರಾಟವಾಗುವ ಔಷಧಿಗಳಿಗೂ 'ರಾಮಬಾಣ'ವನ್ನು ತಗಲಿಸಲಾಗುತ್ತದೆ. 'ಇಂತಿಂಥಾ ರೋಗಕ್ಕೆ ಇದು ರಾಮಬಾಣ'! ಕೆಲವೊಂದು ಕಡೆ 'ಸರ್ವರೋಗಕ್ಕೂ ರಾಮಬಾಣ'! ಈಚೆಗೆ ಅಂಗಡಿಯ ಮುಂದೆ ತೂಗು ಹಾಕಿದ ಫಲಕ ನೋಡಿದೆ – 'ತಲೆಯ ಹೇನು ನಾಶಕ್ಕೆ ಈ ಪುಡಿ ರಾಮಬಾಣ'! ಇವೆಲ್ಲಾ ಬದುಕಿಗೆ ಬಾಣವಾಗದಿದ್ದರೆ ಸಾಕು'!

ಕೊರೊನಾ ಕಾಲಘಟ್ಟ ನೆನಪಿದೆಯೇ? ಆ ಸಂಕಷ್ಟ ಸಮಯವು ಮರೆವಿಗೆ ಜಾರಿವೆ. ಕೊರೊನಾ ಸಮಯದಲ್ಲೇ ರಾಮ ಬಾಣಗಳು ಸುತ್ತಾಡಿದ್ದಕ್ಕೆ ಲೆಕ್ಕವಿಲ್ಲ. ಜ್ವರದ ಲಕ್ಷಣಗಳ ಉದ್ದುದ್ದ ಪಟ್ಟಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದುವು. ವಾಹಿನಿಗಳು ಎಪಿಸೋಡ್ ಮಾಡಿ ಬಿತ್ತರಿಸುತ್ತಿದ್ದುವು. ಜ್ವರ. ತಲೆನೋವು.. ಯಾವುದೇ ಬರಲಿ ಜನರು ಆಸ್ಪತ್ರೆಗೆ ಹೋಗಲು ಹೆದರುತ್ತಿದ್ದರು. ಹಳ್ಳಿಮದ್ದನ್ನು ವಿಶ್ವಾಸದಿಂದ ಸೇವಿಸುತ್ತಿದ್ದರು. ಇಷ್ಟೆಲ್ಲಾ ಗೊಂದಲಗಳು ಆಗುತ್ತಿರುವಾಗ 'ಕೊರೊನಾಗೆ ಲಸಿಕೆಯೇ ರಾಮಬಾಣ' ಎಂದು ಪ್ರಧಾನಿಯವರು ಘೋಷಿಸಿದರು!

ರಾಜಕೀಯ ಕ್ಷೇತ್ರದಲ್ಲಿ ತುಂಬಾ ವಿರಳವಾಗಿ ಬಳಕೆಯಾಗುತ್ತಿದೆ. ಯಾವುದೋ ಒಂದು ವಿಷಯವನ್ನು ವೈಭವೀಕರಿಸಿ, ಅದನ್ನು ರಾಜಕೀಯ ವ್ಯವಸ್ಥೆಗೆ ಟಂಕಿಸುತ್ತಾರೆ. ಉದಾ: ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯಾಯಿತು. ಅದು ದೇಶಕ್ಕೆ ಅಲ್ಲ, ವಿಶ್ವಕ್ಕೇ ಹೆಮ್ಮೆಯ ವಿಚಾರ. ಆ ಸಂದರ್ಭವು ರಾಜಕೀಯದ ಪುಟಗಳಲ್ಲಿ ದಾಖಲಾಯಿತು, 'ಅಯೋಧ್ಯೆ ವಿಷಯ ಬಿಜೆಪಿಗೆ ರಾಮಬಾಣ'! ಅಂದರೆ ಅಯೋಧ್ಯೆಯ ದೇಗುಲ ರಚನೆಯ ಹಿಂದು ಮುಂದಿನ ವಿಚಾರಗಳನ್ನು ಚುನಾವಣೆ ಸಂದರ್ಭದಲ್ಲಿ ಚಲಾವಣೆಗೆ ತರಲು ಅವಕಾಶವಾಯಿತು.

ಕನ್ನಾಡಿನಲ್ಲಿ ಈಗ ಕಾಂಗ್ರೆಸ್ ಪಕ್ಷದ ಸರಕಾರ. ಇದರ 'ಗ್ಯಾರಂಟಿ ಯೋಜನೆ'ಗಳನ್ನು ಜನರು ಪ್ರಾಂಜಲವಾಗಿ ಸ್ವೀಕರಿಸಿದರು. ಸರಕಾರವೂ 'ತಮ್ಮ ಸಾಧನೆ' ಎಂದು ಬಿಂಬಿಸುತ್ತಿದೆ. ಮುಂದಿನ ಚುನಾವಣೆಗೆ ಗ್ಯಾರಂಟಿ ಯೋಜನೆಯು ರಾಮಬಾಣ! ಅಂದರೆ ಈ ವಿಚಾರವನ್ನು ಬೇರೆ ಬೇರೆ ಮಾಧ್ಯಮಗಳ ಮೂಲಕ ಜನಮನಕ್ಕೆ ತಲಪಿಸುತ್ತಾರೆ. ಮತ್ತೆ ಪುನಃ ತಮಗೆ ಮತ ಹಾಕುವಂತೆ ಮನವಿ ಮಾಡುತ್ತಾರೆ. ಇಲ್ಲೂ ರಾಮಬಾಣ ಬಾರದೆ ಇರದು.

ವರುಷದ ಹಿಂದೆ 'ಉರಿಮೂತ್ರ' ಸಮಸ್ಯೆಗೆ ಒಳಗಾಗಿದ್ದೆ. ಆಗ ರಾಚಿ ಬಂದ 'ರಾಮಬಾಣ'ಗಳ ಸಂಖ್ಯೆ ಹತ್ತಲ್ಲ, ನೂರಾರು! ಮನೆಯ ಮಂದಿಗೆ ಒಬ್ಬೊಬ್ಬರು ಔಷಧಿ ಸೂಚಿಸುವಾಗ 'ಬೇಗ ಗುಣವಾಗಲಿ' ಎನ್ನುವ ಉದ್ದೇಶದಿಂದ ಕಷಾಯ ಮಾಡಿದ್ದೇ ಮಾಡಿದ್ದು.

**ಸಂಪೂರ್ಣ ಓದಿಗೆ....**
**www.theruralmirror.com**
**ಅಥವಾ ಇಲ್ಲಿ Scan ಮಾಡಿರಿ..**

**ನಮ್ಮ ಚಾನೆಲ್ ಫಾಲೋ ಮಾಡಲು**